ಹರಪನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಓ ಎಸ್ ಃ 154/2004

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಕೆ.ಬಿ.ಆನಂದಪ್ಪನಾಯ್ಕ | ಪಿ ಡಬ್ಲ್ಯೂಃ 1 |
| ತಂದೆಯ ಹೆಸರು | ಃ ಬೋರಾನಾಯ್ಕ | ಡಿ ಡಬ್ಲ್ಯೂಃ |
| ವಯಸ್ಸು | ಃ 50 ವರ್ಷ | ಪ್ರಮಾಣ ವಚನ ನೀಡಲಾದ |
| ಉದ್ಯೋಗ | ಃ ತಹಶೀಲ್ದಾರರು | ದಿನಾಂಕಃ 08.07.2014 |
| ವಾಸಸ್ಥಳ | ಃ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ ವಿಕಾಸಸೌಧ ಬೆಂಗಳೂರು | |

ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ಶ್ರೀ ಬಿ ಅರ್ ಜಿ ವಕೀಲರಿಂದಃ

ನಾನು ದಿ.19.01.2004 ರಿಂದ ದಿ.04.02.2012 ರವರೆಗೆ ಹರಪನಹಳ್ಳಿ ತಾಲ್ಲೂಕು ಕಛೇರಿಯಲ್ಲಿ ಶಿರಸ್ತೇದಾರನಾಗಿ ಸೇವೆ ಸಲ್ಲಿಸಿರುತ್ತೇನೆ ಮತ್ತು ದಿ.05.02.2013 ರಿಂದ ದಿ.30.04.2014 ರವರೆಗೆ ಉಪವಿಭಾಗಾಧಿಕಾರಿಗಳ ಕಛೇರಿ ಹರಪನಹಳ್ಳಿಯಲ್ಲಿ ಗ್ರೇಡ್-2 ತಹಶೀಲ್ದಾರನಾಗಿ ಸೇವೆ ಸಲ್ಲಿಸಿರುತ್ತೇನೆ. ನಾನು ನ್ಯಾಯಾಲಯದ ಸಮನ್ಸ್ ಬಂದ ಮೇರೆಗೆ ಈ ದಾವೆಗೆ ಸಂಬಂಧಿಸಿದಂತೆ ಪ್ರತಿವಾದಿ ಪರ ವಕೀಲರು ಕೇಳಿದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರಿಗೆ ಹಾಜರುಪಡಿಸಲು ಕೇಳಲಾದ ದಾಖಲೆಗಳಲ್ಲಿ ಕ್ರಮ ಸಂಖ್ಯೆ.1 ಮತ್ತು 2 ನ್ನು ಈಗಾಗಲೇ ಗುರುತಿಸಲಾಗಿದೆ. ದಿ.16.06.2008 ರಂದು ಜಿ.ಹೆಚ್.ಬಸವರಾಜ್ 1ನೇ ಪ್ರತಿವಾದಿಯ ಮಗ ಈತನು ಸಲ್ಲಿಸಿದ ದೂರು ಅರ್ಜಿಯ ಪ್ರತಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.49 ಎಂದು ಗುರುತಿಸಲಾಯಿತು. ತಹಶೀಲ್ದಾರ ಹರಪನಹಳ್ಳಿ ರವರು ನನಗೆ ನೀಡಿದ ನೋಟಿಸಿನ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.50 ಎಂದು ಗುರುತಿಸಲಾಯಿತು. ಸದರಿ ನಿಡಿ.50 ಕ್ಕೆ ಸಾಕ್ಷಿದಾರರು ನೀಡಿದ ಉತ್ತರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ.51 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸೇವಾ ದೃಡಿಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ.52 ಎಂದು ಗುರುತಿಸಲಾಯಿತು. ನಿಡಿ.49 ರಿಂದ 51 ರಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು 1ನೇ ಮತ್ತು 2ನೇ ಸಾಕ್ಷಿದಾರರ ಸೇವಾ ಅವಧಿಯ ಸೇವಾ ದೃಡಿಕರಣ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ, ಸದರಿ ದಾಖಲೆಗಳನ್ನು ಹಾಜರುಪಡಿಸಲು ಕೇಳಿದ್ದರೂ ಸಹ ಹಾಜರುಪಡಿಸಿರುವುದಿಲ್ಲ ಆದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಶ್ರೀ ಬಿಆರ್‌ಜಿ ಪ್ರತಿವಾದಿಗಳ ಪರ ವಕೀಲರು ಅನುಮತಿ ಕೇಳಿರುತ್ತಾರೆ ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಬಿಆರ್‌ಜಿ ವಕೀಲರಿಂದ ಃ

ಎಮ್.ಆರ್.ನಂ.187/2005-06 ರ ಹಕ್ಕುಬದಲಾವಣೆಯನ್ನು ಅಸಲು ದಾವೆ ಸಂಖ್ಯೆ.154/2004 ರ ಪ್ರಾಥಮಿಕ ಡಿಕ್ರಿಯ ಆಧಾರದ ಮೇಲೆ ಮಾಡಿರುತ್ತೇವೆ ಎಂದರೆ ಸರಿ. ಈ ರೀತಿ ಪ್ರಾಥಮಿಕ ಡಿಕ್ರಿಯ ಆಧಾರದ ಮೇಲೆ ಹಕ್ಕುಬದಲಾವಣೆ ಮಾಡಲು ಕಾನೂನಿನಡಿಯಲ್ಲಿ ನಿಯಮಗಳು ಇರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದ ಆದೇಶದ ಮೇರೆಗೆ ಹಕ್ಕು ಬದಲಾವಣೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಡಿಕ್ರಿಯಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶ ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು

ಹೇಳುವುದೇನೆಂದರೆ ಈ ರೀತಿ ಸಾಮಾನ್ಯವಾಗಿ ಆದೇಶ ಇರುವುದಿಲ್ಲ ಎಂದು ಹೇಳುತ್ತಾರೆ. ನಾನು ಕಾನೂನು ಬಾಹಿರವಾಗಿ ಎಮ್.ಆರ್.ನಂ.187/2005-06 ಹಕ್ಕು ಬದಲಾವಣೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಿಯಾಜಾನ್ ಮತ್ತು ವಿ.ಎಮ್.ಜಿಂಗಾಡೆ ಹಾಗೂ ನಾನು ಈ ಕೇಸಿನ ಎಮ್.ಆರ್.ನಂ.187/2005-06 ರ ಹಕ್ಕು ಬದಲಾವಣೆಯನ್ನು ಮಾಡಿದ ಸಂದರ್ಭದಲ್ಲಿ ಮಾಚಿಹಳ್ಳಿ ಕಂದಾಯ ಗ್ರಾಮ ಮೇಲ್ವಿಚಾರಕನಾಗಿದ್ದೇನು ಎಂದರೆ ಸರಿ. ನಾವು 3 ಜನ ಅಧಿಕಾರಿಗಳು ವಾದಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸದರಿ ಹಕ್ಕು ಬದಲಾವಣೆಯನ್ನು ಕಾನೂನು ಬಾಹಿರವಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ.49 ದೂರಿಗೆ ಸುಳ್ಳು ಮಾಹಿತಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ಹಕ್ಕುಬದಲಾವಣೆ ಮಾಡಿರುವುದು ಕಾನೂನು ಬಾಹಿರವಾಗಿರುವುದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ 1, 3, ಮತ್ತು 4ನೇ ಪ್ರತಿವಾದಿಗಳಿಗೆ ನಾವು ಮಾಡಿರುವ ಹಕ್ಕುಬದಲಾವಣೆಯಿಂದ ತುಂಬಲಾರದಷ್ಟು ನಷ್ಟವಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಕಾನೂನಿನ ಜ್ಞಾನ ಇದ್ದರೂ ಸಹ ಅಕ್ರಮವಾಗಿ ಹಕ್ಕು ಬದಲಾವಣೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ಎವಿನ್ ವಕೀಲರಿಂದ ಃ

ಸಮಯ ಕೇಳಿರುತ್ತಾರೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.